ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 19ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳು

ದಿನಾಂಕ: 21-05-2018ರಂದು ಸೋಮವಾರ ಮಧ್ಯಾಹ್ನ:3.30 ಗಂಟೆಗೆ

ಸ್ಥಳ: ವೈದ್ಯಕೀಯ ಶಿಕ್ಷಣ ಇಲಾಖೆ,
ಕೊಠಡಿ ಸಂಖ್ಯೆ: 601, 6ನೇ ಮಹಡಿ, 4ನೇ ಹಂತ,
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು.

ಕರ್ನಾಟಕ ಸರ್ಕಾರ
# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
# HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699 Email:directorhims@yahoo.com

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

## 19ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 19ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್ ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:21-05-2018ರಂದು ಸೋಮವಾರ ಮಧ್ಯಾಹ್ನ:3.30ಗಂಟೆಗೆ ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ:09**

| | | | |
|---|---|---|---|
| 1 | ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 4 | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 5 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 6 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 8 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಸಲಹೆಗಾರರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:28-11-2017 ರಂದು ನಡೆದ 18ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದರ ಬಗ್ಗೆ. | ದಿನಾಂಕ:28-11-2017ರಂದು ನಡೆದ 18ನೇ ಆರ್ಥಿಕ ಸಮಿತಿ ಸಭೆಯಲ್ಲಿ 26 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ದಿನಾಂಕ:06-1-2018ರಂದು ನಡೆದ ಸಂಸ್ಥೆಯ 31ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಸಂಸ್ಥೆಯಿಂದ ತೆಗೆದುಕೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 2 | ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದಲ್ಲಿ ಸಂಸ್ಥೆಯ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ 2017-18ನೇ ಸಾಲಿಗೆ ವಿವಿಧ ಲೆಕ್ಕ-ಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ, ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಬಳಕೆ, ಯೂಸರ್ಸ್ ನಿಧಿಯಲ್ಲಿ ಸಂಗ್ರಹವಾದ ಶುಲ್ಕದ ವಿವರ, ಬ್ಯಾಂಕ್‌ನಲ್ಲಿ ಠೇವಣಿ ರೂಪದಲ್ಲಿ ಇರುವ ಅನುದಾನ ಹಾಗೂ 2017-18ನೇ ಸಾಲಿನ ಅಂತ್ಯಕ್ಕೆ ಅಖೈರು ಶಿಲ್ಕು ರೂಪದಲ್ಲಿರುವ ಅನುದಾನಗಳ ಸವಿವರವಾದ ಮಾಹಿತಿಗಳೊಂದಿಗೆ 2018-19ನೇ ಸಾಲಿಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಸಂಸ್ಥೆಗೆ ಬಿಡುಗಡೆಯಾಗಿರುವ ಅನುದಾನದ ಸವಿವರವಾದ ಮಾಹಿತಿಗಳನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ವಾರ್ಷಿಕವಾರು ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ವಿವಿಧ ಲೆಕ್ಕಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನ ಮತ್ತು ಹಣ ಬಳಕೆಯ ವಿವರಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 3 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ 2018-19ನೇ ಸಾಲಿನಲ್ಲಿ ನಿಗದಿಯಾಗಿರುವ ಅನುದಾನದ ಬಗ್ಗೆ ವಿಮರ್ಶೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆ ಮತ್ತು ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇಲ್ಲಿನ ಸಿಬ್ಬಂದಿ ವೇತನ, ಶಿಷ್ಯ ವೇತನ, ಗ್ರಂಥಾಲಯ ಪುಸ್ತಕ, ಔಷಧಿ ಮತ್ತು ರಾಸಾಯನಿಕಗಳು, ಹೊರಗುತ್ತಿಗೆ ಸಿಬ್ಬಂದಿಗಳ ನಿರ್ವಹಣೆ, ಪೌಷ್ಟಿಕ್ ಪುರ್ನವಸತಿ ಘಟಕ ಸಿಬ್ಬಂದಿಗಳ ವೇತನ, ವೈದ್ಯಕೀಯ ವೆಚ್ಚ ಮರುಪಾವತಿ, ಪ್ರಯಾಣ ಭತ್ಯೆ, 3ನೇ ಹಂತದ ಕಟ್ಟಡ ಕಾಮಗಾರಿ, ಹೊಸ ಆಸ್ಪತ್ರೆ ಕಟ್ಟಡಕ್ಕೆ ಉಪಕರಣ, ಪೀಠೋಪಕರಣಗಳ ಖರೀದಿ ಮತ್ತು ರಿಪೇರಿ, ಪರಿಶಿಷ್ಟ ಜಾತಿ ಮತ್ತು ಗಿರಿಜನ ಉಪಯೋಜನೆಗೆ, ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳು, ಹಾಗೂ ಇತರೆ ವೆಚ್ಚ ಭರಿಸಲು 2018-19ನೇ ಸಾಲಿನಲ್ಲಿ ಅಂದಾಜು ರೂ.13909.17 ಲಕ್ಷಗಳಿಗೆ ಆಯವ್ಯಯ ಮುಂಗಡದ ಬೇಡಿಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಆದರೆ ಸರ್ಕಾರವು 2018-19ನೇ ಸಾಲಿಗೆ ಹಿಮ್ಸ್ ಸಂಸ್ಥೆಗೆ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

ನಿಗದಿಮಾಡಿರುವ ರೂ.9148.99 ಲಕ್ಷಗಳ ಅನುದಾನದ ವಿವರನವನ್ನು ಸಭೆಯ ಅವಗಾಹನೆಗೆ ತರಲಾಯಿತು.

**2018-19ನೇ ಸಾಲಿಗೆ ಸರ್ಕಾರದಿಂದ ನಿಗದಿಯಾಗಿರುವ ಅನುದಾನದ ವಿವರ**

| ಕ್ರ.ಸಂ | ವಿವರಗಳು | ಲೆಕ್ಕಶೀರ್ಷಿಕೆ | ನಿಗದಿಯಾಗಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ವೇತನಗಳು | 2210-05-105-1-49-101 | 6128.00 |
| 2 | ಸಾಮಾನ್ಯ | 2210-05-105-1-49-103 | 911.00 |
| 3 | ಗುತ್ತಿಗೆ/ಹೊರಗುತ್ತಿಗೆ | 2210-05-105-1-49-115 | 707.00 |
| 4 | ವಿಶ್ರಾಂತಿ ವೇತನಗಳು | 2210-05-105-1-49-118 | 25.00 |
| 5 | ಪರಿಶಿಷ್ಟ ಜಾತಿ ಉಪಯೋಜನೆ | 2210-05-105-1-49-422 | 79.00 |
| 6 | ಗಿರಿಜನ ಉಪಯೋಜನೆ | 2210-05-105-1-49-423 | 39.00 |
| 7 | ನಿರ್ಮಾಣ | 4210-03-105-1-02-386 | 1080.00 |
| 8 | ಪರಿಶಿಷ್ಟ ಜಾತಿ ಉಪಯೋಜನೆ | 4210-03-105-1-02-422 | 166.66 |
| 9 | ಗಿರಿಜನ ಉಪಯೋಜನೆ | 4210-03-105-1-02-422 | 13.33 |
| | ಒಟ್ಟು | | **9148.99** |

ಮುಂದುವರೆದು

- ➤ ಲೆಕ್ಕಶೀರ್ಷಿಕೆ 2210(101) ವೇತನಕ್ಕಾಗಿ ಸರ್ಕಾರವು ರೂ.6128.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿದ್ದು, 6ನೇ ವೇತನ ಆಯೋಗವು ಸಿಬ್ಬಂದಿಗಳ ವೇತನವನ್ನು ಪರಿಷ್ಕರಿಸಿ ಶಿಫಾರಸ್ಸು ಮಾಡಿರುವ ವೇತನವನ್ನು ಸರ್ಕಾರವು 1-04-2018ರಿಂದ ಜಾರಿಗೆ ಬರುವಂತೆ ಸಿಬ್ಬಂದಿಗಳ ವೇತನ ಪರಿಷ್ಕೃತಗೊಳ್ಳುವುದರಿಂದ ಉಂಟಾಗುವ ಅನುದಾನದ ಕೊರತೆ.
- ➤ ಲೆಕ್ಕಶೀರ್ಷಿಕೆ 2210(103) ಸಾಮಾನ್ಯ ವೆಚ್ಚಕ್ಕಾಗಿ ರೂ.1804.00 ಲಕ್ಷಗಳ ಕೋರಿದ್ದು ಸರ್ಕಾರವು ರೂ.911.00 ಲಕ್ಷಗಳ ಅನುದಾನವನ್ನು ನಿಗದಿಮಾಡಿರುತ್ತದೆ. ಈ ಪೈಕಿ ಔಷಧಿ ಮತ್ತು ರಾಸಾಯನಿಕಗಳ ಖರೀದಿಗಾಗಿಯೇ ರೂ.1200.00 ಲಕ್ಷಗಳ ಅನುದಾನ ಅವಶ್ಯಕತೆ ಇರುವುದರಿಂದ ಒಟ್ಟಾರೆಯಾಗಿ ಸದರಿ ಲೆಕ್ಕಶೀರ್ಷಿಕೆಯಡಿ ಉಂಟಾಗುವ ರೂ.893.00 ಲಕ್ಷಗಳ ಕೊರತೆ.
- ➤ ಲೆಕ್ಕಶೀರ್ಷಿಕೆ 2210(115) ಹೊರಗುತ್ತಿಗೆ ಸಿಬ್ಬಂದಿಗಳ ವೇತನಕ್ಕಾಗಿ ಸರ್ಕಾರವು ರೂ.707.00 ಲಕ್ಷಗಳನ್ನು ನಿಗದಿ ಮಾಡಿದ್ದು ಸದರಿ ಸಾಲಿಗೆ ರೂ.933.10 ಲಕ್ಷಗಳ ಅನುದಾನ ಅವಶ್ಯಕತೆ ಇದ್ದು ರೂ.226.10 ಲಕ್ಷಗಳ ಅನುದಾನ ಕೊರತೆ ಉಂಟಾಗುವುದರ ವಿವರವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ಸರ್ಕಾರದಿಂದ ನಿಗದಿಯಾಗಿರುವ ಅನುದಾನಕ್ಕೆ ಅನುಗುಣವಾಗಿ ಅಗತ್ಯ ವಸ್ತುಗಳ ಬಳಕೆ ಪ್ರಮಾಣವನ್ನು ಕಡಿಮೆ ಮಾಡಿ ಖರೀದಿ ಪ್ರಕ್ರಿಯೆಯನ್ನು ನಡೆಸುವಂತೆಯು ಜೊತೆಗೆ ಸಂಸ್ಥೆಯ ಬೋಧಕ

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಆಸ್ಪತ್ರೆಯ ಯೂಸರ್ಸ್ ನಿಧಿಯನ್ನು ಹೆಚ್ಚಿಸಿಕೊಳ್ಳುವಂತೆಯು ಆದಾಗ್ಯೂ ಅನುದಾನದ ಕೊರತೆ ಉಂಟಾದಲ್ಲಿ ಮುಂದಿನ ದಿನಗಳಲ್ಲಿ ಕೊರತೆಯಾಗುವ ಅನುದಾನಕ್ಕೆ ಪ್ರತ್ಯೇಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>ಮುಂದುವರೆದು 6ನೇ ವೇತನ ಆಯೋಗವು ಶಿಫಾರಸ್ಸು ಮಾಡಿರುವ ವೇತನದ ವ್ಯತ್ಯಾಸದ ಅನುದಾನಕ್ಕೆ ಸರ್ಕಾರದಿಂದ ಪ್ರತ್ಯೇಕ ಅನುದಾನ ಬಿಡುಗಡೆಯಾಗುವುದಿಲ್ಲ. ಪ್ರಸ್ತುತ ಸರ್ಕಾರವು ಸಿಬ್ಬಂದಿ ವೇತನಕ್ಕೆಂದು ಬಿಡುಗಡೆ ಮಾಡಿರುವ ಅನುದಾನದಲ್ಲಿಯೇ ಸದರಿ ವೇತನದ ವೆಚ್ಚವನ್ನು ಭರಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 4 | ದಿನಾಂಕ:21-05-2018 ರಂದು ನಡೆಯುವ 10ನೇ ಕಾಮಗಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳಿಗೆ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವಶ್ಯಕವಿರುವ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ ಇಲಾಖೆ, ವೈ.ಶಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:21-05-2018ರಂದು ನಡೆದ 10ನೇ ಕಾಮಗಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳನ್ನು ದಿನಾಂಕ:21-05-2018ರಂದು ನಡೆದ ಸಂಸ್ಥೆಯ 19ನೇ ಆರ್ಥಿಕ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು ಮುಂದಿನ ಆಡಳಿತ ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಆ.ಕು.ಕ.ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನ ಇವರ ಮುಖಾಂತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 5 | 2018-19ನೇ ಸಾಲಿಗೆ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಔಷಧಿ ಹಾಗೂ ಇತರೆ ವಸ್ತುಗಳ ಸರಬರಾಜಿಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿ ಹಾಗೂ ಇತರೆ ವಸ್ತುಗಳ ಸರಬರಾಜಿಗೆ 2017-18ನೇ ಸಾಲಿನಲ್ಲಿ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.841.00 ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಇ-ಟೆಂಡರ್ ಅವಧಿಯು ದಿನಾಂಕ: 5-12-2018 ರಂದು ಮುಕ್ತಾಯಗೊಳ್ಳುತ್ತಿರುವುದರಿಂದ 2018-19ನೇ ಸಾಲಿಗೆ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿ ಹಾಗೂ ಇತರೆ ವಸ್ತುಗಳಿಗೆ ವಿಭಾಗದ ಮುಖ್ಯಸ್ಥರುಗಳು ಅಂದಾಜು ರೂ.885.00 ಲಕ್ಷಗಳಿಗೆ ಸಲ್ಲಿಸಿರುವ ಬೇಡಿಕೆ ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತರುತ್ತಾ 2018-19ನೇ ಸಾಲಿಗೆ ಔಷಧಿ, ರಾಸಾಯನಿಕಗಳು, ಡಯಟ್ ಹಾಗೂ ಆಸ್ಪತ್ರೆಯ ಇತರೆ ಎಲ್ಲಾ ನಿರ್ವಹಣಾ ವೆಚ್ಚಗಳು ಸೇರಿದಂತೆ ಸಂಸ್ಥೆಯಿಂದ ರೂ.1804.00 ಲಕ್ಷಗಳಿಗೆ ಬೇಡಿಕೆ ಸಲ್ಲಿಸಿದ್ದು ಸರ್ಕಾರವು ಇವೆಲ್ಲವು ಸೇರಿದಂತೆ ರೂ.911.00 ಲಕ್ಷಗಳ ಅನುದಾನ ಮಾತ್ರ ನಿಗದಿ ಮಾಡಿರುವುದರಿಂದ ಪ್ರಸ್ತುತ ಸಾಲಿನಲ್ಲಿ ಅನುದಾನ ಕೊರತೆ ಉಂಟಾಗುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| Sl.No. | Particulars | Numbers | Total Numbers |
|---|---|---|---|
| 1 | Tablets | 334 | 2,20,42,798.00 |
| 2 | Injections | 179 | 2,93,79,360.00 |
| 3 | Miscellaneous | 302 | 2,49,07,881.00 |
| 4 | Suture Materials | 32 | 63,53,240.00 |
| 5 | Dialysis | 17 | 58,07,539.00 |
| **Total** | | | **8,84,90,820.00** |

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. 2018–19ನೇ ಸಾಲಿನಲ್ಲಿ ಸಂಸ್ಥೆಯಿಂದ ಕೋರಲಾಗಿದ್ದ ಅನುದಾನಕ್ಕಿಂತ ಕಡಿಮೆ ಅನುದಾನವು ಸರ್ಕಾರದಿಂದ ನಿಗದಿಯಾಗಿರುವುದರಿಂದ ಬೇಡಿಕೆ ಪಟ್ಟಿಯನ್ನು ಪರಿಷ್ಕರಿಸಿ ಔಷಧಿ, ಮಾತ್ರೆ ಹಾಗೂ ಇತರೆ ವಸ್ತುಗಳ ಪರಿಮಾಣವನ್ನು ಕಡಿಮೆ ಮಾಡಿ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49 (103) ಅಡಿಯಲ್ಲಿ ಭರಿಸುವುದೆಂದು ಹಾಗೂ ಮುಂದಿನ ದಿನದಲ್ಲಿ ಕೊರತೆಯಾಗುವ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 6 | 2018–19ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆಗೆ ಅಗತ್ಯವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, | ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಮತ್ತು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅವಶ್ಯಕವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಸರಬರಾಜಿಗೆ 2017–18ನೇ ಸಾಲಿನಲ್ಲಿ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.82.00 ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಇ-ಟೆಂಡರ್ ಅವಧಿಯು ದಿನಾಂಕ:28-11-2018 ರಂದು ಮುಕ್ತಾಯಗೊಳ್ಳಲಿದ್ದು, 2018–19ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಸರಬರಾಜಿಗೆ ವಿಭಾಗದ ಮುಖ್ಯಸ್ಥರುಗಳು ಅಂದಾಜು ರೂ.125.28 ಲಕ್ಷಗಳಿಗೆ ಸಲ್ಲಿಸಿರುವ ಬೇಡಿಕೆ ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತರುತ್ತಾ ಅಜೆಂಡಾ ಕ್ರಮ ಸಂಖ್ಯೆ:5ರಲ್ಲಿ ವಿವರಿಸುವಂತೆ ಕೊರತೆಯಾಗುವ ಅನುದಾನದ ಮಾಹಿತಿಯನ್ನು ಸಭೆಯ ಮುಂದೆ ಮಂಡಿಸಿದರು. |

| Sl.No. | Particulars | List of items | Total amount |
|---|---|---|---|
| 1 | Chemicals | 245 | 3086613.000 |
| 2 | Reagents Kits | 112 | 7450535.00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಸರಬರಾಜಿಗೆ ಸಂಬಂಧಿಸಿದಂತೆ ಇ-ಟೆಂಡರ್ ಕರೆಯುವ ಬಗ್ಗೆ. | (see table and text below) |

| | | | |
|---|---|---|---|
| 3 | Disc | 90 | 286870.00 |
| 4 | Glass ware | 123 | 1704603.00 |
| | Total | 570 | 1,25,28,621.00 |

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. 2018-19ನೇ ಸಾಲಿನಲ್ಲಿ ಸಂಸ್ಥೆಯಿಂದ ಕೋರಲಾಗಿದ್ದ ಅನುದಾನಕ್ಕಿಂತ ಕಡಿಮೆ ಅನುದಾನವು ಸರ್ಕಾರದಿಂದ ನಿಗದಿಯಾಗಿರುವುದರಿಂದ ಬೇಡಿಕೆ ಪಟ್ಟಿಯನ್ನು ಪರಿಷ್ಕರಿಸಿ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಪರಿಮಾಣವನ್ನು ಕಡಿಮೆ ಮಾಡಿ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49 (103) ಅಡಿಯಲ್ಲಿ ಭರಿಸುವುದೆಂದು ಹಾಗೂ ಮುಂದಿನ ದಿನದಲ್ಲಿ ಕೊರತೆಯಾಗುವ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.

ಮುಂದುವರೆದು ಸರ್ಕಾರವು ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗಳ ಶುಲ್ಕವನ್ನು ನಿಗದಿಪಡಿಸಿ ಬಹಳ ವರ್ಷಗಳೇ ಕಳೆದಿದ್ದು, ವಿದ್ಯಾರ್ಥಿಗಳ ಪಾಠ-ಪ್ರವಚನಕ್ಕೆ ಅಗತ್ಯವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಹಾಗೂ ಇತರೆ ಸಾಮಗ್ರಿಗಳ ನಿರ್ವಾಹಣಾ ವೆಚ್ಚ ಅಧಿಕವಾಗುತ್ತಿರುವುದರಿಂದ ವಿದ್ಯಾರ್ಥಿಗಳ ಶುಲ್ಕವನ್ನು ಹೆಚ್ಚಿಸಿದ್ದಲ್ಲಿ ಸದರಿ ವೆಚ್ಚವನ್ನು ಭರಿಸಲು ಅನುಕೂಲವಾಗುತ್ತದೆಂದು ಪರಿಗಣಿಸಿ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ ವರದಿ ತಯಾರಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ನಿರ್ದೇಶಕರು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಸೂಚಿಸಲಾಯಿತು.

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 7 | 2018-19ನೇ ಸಾಲಿಗೆ ಸಾರ್ವಜನಿಕರ ವಾಹನ ನಿಲುಗಡೆಗೆ ಸಂಸ್ಥೆಯ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲು ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಸಾರ್ವಜನಿಕರ ವಾಹನ ನಿಲುಗಡೆಗೆ ಸಂಸ್ಥೆಯ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆಗೆ 2017-18ನೇ ಸಾಲಿನಲ್ಲಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯಲಾಗಿದ್ದು ವಾರ್ಷಿಕ ರೂ.6.87 ಲಕ್ಷಗಳಿಗೆ ಟೆಂಡರ್ ನಿಗದಿಯಾಗಿದ್ದು, ಸದರಿ ಇ-ಟೆಂಡರ್ ಅವಧಿಯು ದಿನಾಂಕ: 24-10-2018 ರಂದು ಮುಕ್ತಾಯಗೊಳ್ಳಲಿದ್ದು, 2018-19ನೇ ಸಾಲಿಗೆ ಸಾರ್ವಜನಿಕರ ವಾಹನ ನಿಲುಗಡೆಗೆ ಸಂಸ್ಥೆಯ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದರ ಬಗ್ಗೆ ಸಂಸ್ಥೆ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><th>ಕ್ರಮ ಸಂಖ್ಯೆ</th><th>ವಾಹನ ನಿಲುಗಡೆಗೆ ಗುರುತುಪಡಿಸಿರುವ ಸ್ಥಳದ ವಿವರ</th><th>ವಾಹನಗಳ ವಿವರ</th><th>ನಿಗದಿಪಡಿಸಿರುವ ಪಾರ್ಕಿಂಗ್ ಅಳತೆ (ಮೀಟರ್‌ಗಳಲ್ಲಿ )</th></tr>
<tr><td>1</td><td>ಹಳೆ ಆಸ್ಪತ್ರೆ ಆವರಣದ ಮಕ್ಕಳ ಹೊರವಿಭಾಗದ ಮುಂಭಾಗದಲ್ಲಿ ವಾಹನ ನಿಲುಗಡೆಗೆ</td><td>04 ಚಕ್ರದ ವಾಹನಗಳು</td><td>50 X 30</td></tr>
<tr><td>2</td><td>ಹಳೆ ಆಸ್ಪತ್ರೆಯ ಕಟ್ಟಡದ ಮುಂಭಾಗದಲ್ಲಿ ವಾಹನ ನಿಲುಗಡೆಗೆ (ಹಿಂದಿನ ಆಟೋ ನಿಲ್ದಾಣದ ಜಾಗ)</td><td>ದ್ವಿಚಕ್ರದ ವಾಹನಗಳು</td><td>12x42</td></tr>
<tr><td>3</td><td>ಐ.ಎಮ್.ಎ. ಕಟ್ಟಡಕ್ಕೆ ಹೊಂದಿಕೊಂಡಂತೆ ಇರುವ ಖಾಲಿ ಜಾಗದಲ್ಲಿ ವಾಹನ ನಿಲುಗಡೆಗೆ ಅವಕಾಶ</td><td>04 ಚಕ್ರದ ವಾಹನಗಳು</td><td>21 X 27</td></tr>
<tr><td>4</td><td>ಹೊಸ ಬೋಧಕ ಆಸ್ಪತ್ರೆ ಕಟ್ಟಡದ ಮುಖ್ಯ ಪ್ರವೇಶದ ದ್ವಾರದ ಎಡಭಾಗದಲ್ಲಿ ಎಲ್ ಆಕಾರದಲ್ಲಿ ವಾಹನ ನಿಲುಗಡೆಗೆ ಸ್ಥಳಾವಕಾಶ</td><td>ದ್ವಿಚಕ್ರ ಮತ್ತು<br>04 ಚಕ್ರದ ವಾಹನಗಳು</td><td>30x100</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಶವಾಗಿ ಚರ್ಚಿಸಲಾಯಿತು. ಹಿಮ್ಸ್ ಸಂಸ್ಥೆಯು ನಗರದ ಹೃದಯದ ಭಾಗದಲ್ಲಿರುವುದರಿಂದ ಸಾರ್ವಜನಿಕರು ವಾಹನಗಳನ್ನು ಸಂಸ್ಥೆಯ ಆವರಣದಲ್ಲಿ ನಿಲ್ಲಿಸುವುದರಿಂದ ಆಸ್ಪತ್ರೆಗೆ ಬರುವ ರೋಗಿಗಳಿಗೆ ತೊಂದರೆಯಾಗುವುದನ್ನು ಪರಿಗಣಿಸಿ (ದ್ವಿಚಕ್ರವಾಹನಗಳಿಗೆ) ಉಚಿತ ನಿಲುಗಡೆಗೆ ಅವಕಾಶ ಮಾಡಿಕೊಡುವುದು ಉಳಿದಂತೆ ದ್ವಿ-ಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳ ನಿಲುಗಡೆಗೆ ಸ್ಟ್ಯಾಂಡ್‌ನ ರುಸುಂ ವಸೂಲಾತಿ ಹಕ್ಕನ್ನು 2018-19ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.
</td></tr>
<tr><td>8</td><td>ರಕ್ತನಿಧಿ ವಿಭಾಗದಲ್ಲಿ ಶೇಖರಣೆಯಾಗುವ Fresh Frozen Plasma ವಿಲೇವಾರಿ ಮಾಡಲು ಇ-ಟೆಂಡರ್ ಕರೆಯುವ</td><td>ವಿವಿಧ ರಕ್ತದಾನ ಶಿಬಿರಗಳಲ್ಲಿ ಸಂಗ್ರಹವಾಗುವ ರಕ್ತದ ಬಾಟಲ್ ಗಳನ್ನು ಆಸ್ಪತ್ರೆಯ ರಕ್ತನಿಧಿ ವಿಭಾಗದಲ್ಲಿ ಶೇಖರಿಸಿ ರಕ್ತವನ್ನು ಪ್ರತ್ಯೇಕಿಸಿದಾಗ ಅದರಿಂದ ಬೇರ್ಪಟ್ಟ Fresh Frozen Plasmaವನ್ನು ಪ್ರತ್ಯೇಕವಾಗಿ ಶೇಖರಿಸಿ ಇ-ಟೆಂಡರ್ ಮೂಲಕ ರೂ.8.00ಲಕ್ಷಗಳಿಗೆ ವಿಲೇವಾರಿ ಮಾಡಲಾಗಿದ್ದು, ಸದರಿ ಟೆಂಡರ್ ಅವಧಿಯೂ ದಿನಾಂಕ:31-08-2018ರಂದು ಮುಕ್ತಾಯವಾಗಲಿರುವುದರಿಂದ 2018-19ನೇ ಸಾಲಿಗೆ ಇ-ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ವಿಷಯವನ್ನು ಸಭೆಯಲ್ಲಿ ಮಂಡಿಸಿದರು.<br><br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ರಕ್ತನಿಧಿ ವಿಭಾಗದಲ್ಲಿ ಸಂಗ್ರಹವಾಗುವ Fresh Frozen Plasma</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಬಗ್ಗೆ. | ವಾರ್ಷಿಕ ವಿಲೇವಾರಿ ಮಾಡಲು ಇ-ಟೆಂಡರ್ ಕರೆಯುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 9 | 2018-19ನೇ ಸಾಲಿಗೆ ಆಸ್ಪತ್ರೆಯ ಡಯಟ್ ವಿಭಾಗಕ್ಕೆ ಅವಶ್ಯಕತೆ ಇರುವ ಆಹಾರ ಪದಾರ್ಥಗಳು ಮತ್ತು ಪ್ರಥಮದರ್ಜೆ ಬ್ರೆಡ್ ಸರಬರಾಜಿಗಾಗಿ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ಒಳ ರೋಗಿಗಳಿಗೆ ಪ್ರತಿನಿತ್ಯ ಆಹಾರ ನೀಡುವ ಸಲುವಾಗಿ 2017-18ನೇ ಸಾಲಿನಲ್ಲಿ ಕರೆಯಲಾಗಿದ್ದ ಆಹಾರ ಪದಾರ್ಥಗಳು ಮತ್ತು ಪ್ರಥಮ ದರ್ಜೆ ಬ್ರೆಡ್‌ನ ಸರಬರಾಜಿನ ಟೆಂಡರ್ ಅವಧಿಯು ದಿನಾಂಕ:30-09-2018 ಮುಕ್ತಾಯಗೊಳ್ಳಲಿದೆ. 2018-19ನೇ ಸಾಲಿಗೆ 750 ಹಾಸಿಗೆಗಳ ಸಾಮಾರ್ಥ್ಯಕ್ಕೆ ಅನುಗುಣವಾಗಿ ಅವಶ್ಯಕವಿರುವ ಆಹಾರ ಪದಾರ್ಥಗಳು ಮತ್ತು ಪ್ರಥಮ ದರ್ಜೆ ಬ್ರೆಡ್‌ನ ಸರಬರಾಜು ಪಡೆಯಲು ಒಂದು ವರ್ಷದ ಅವಧಿಗೆ ಹೊಸದಾಗಿ ಇ-ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br><br>ಕ್ರಮ ಸಂಖ್ಯೆ / ಪದಾರ್ಥಗಳು / 2017-18ರ ಅವಧಿಯ ಟೆಂಡರ್ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) / 2018-19ರ ಅವಧಿಯ ಟೆಂಡರ್ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)<br>1 / ಆಹಾರ ಪದಾರ್ಥಗಳು / 82,00,000.00 / 1,38,12,108.00<br>2 / ಪ್ರಥಮ ದರ್ಜೆ ಬ್ರೆಡ್ / 16,90,000.00 / 19,57,500.00<br><br>ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. 2018-19ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳಿಗೆ ಅವಶ್ಯಕವಿರುವ ಆಹಾರ ಪದಾರ್ಥಗಳು ಮತ್ತು ಪ್ರಥಮ ದರ್ಜೆ ಬ್ರೆಡ್ ಸರಬರಾಜಿಗೆ ಟೆಂಡರ್ ಕರೆದು ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49 (103) ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 10 | ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಲೆನಿನ್ ಸಾಮಗ್ರಿಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯು 850 ಹಾಸಿಗೆಗಳ ಸೌಕರ್ಯವನ್ನು ಒಳಗೊಂಡಿದ್ದು ಆಸ್ಪತ್ರೆಗೆ 2018-19ನೇ ಸಾಲಿಗೆ ಅವಶ್ಯಕವಿರುವ ಕೆಳಕಂಡ ಲೆನಿನ್ ಸಾಮಗ್ರಿಗಳನ್ನು ಸರಬರಾಜು ಮಾಡಿಸಿಕೊಡಬೇಕೆಂದು ವೈದ್ಯಕೀಯ ಅಧೀಕ್ಷಕರು ರೂ.42.73 ಲಕ್ಷಗಳಿಗೆ ಸಲ್ಲಿಸಿದ್ದ ಬೇಡಿಕೆಯ ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br><br>ಕ್ರಮ ಸಂಖ್ಯೆ / ದಾಸ್ತಾನಿನ ವಿವರ / ಹಾಲಿ ಇರುವ ದಾಸ್ತಾನು / ಅವಶ್ಯಕ ಇರುವ ದಾಸ್ತಾನು / 850 ಹಾಸಿಗೆಗೆ ಅನುಪಾತದಲ್ಲಿ / ದರ 1ಕ್ಕೆ / ಅಂದಾಜು ವೆಚ್ಚ<br>01 / Red Blankets / 1073 / 1477 / 1:3 / 755.00 / 11,15,135.00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><td>02</td><td>Color Bed sheets</td><td>2578</td><td>1672</td><td>1:5</td><td>475.00</td><td>7,94,200.00</td></tr>
<tr><td>03</td><td>Pillow covers</td><td>1441</td><td>2809</td><td>1:5</td><td>80.00</td><td>2,24,720.00</td></tr>
<tr><td>04</td><td>*Mosquito Nets</td><td>950</td><td>*1900</td><td>1:3</td><td>510.00</td><td>*9,69,000.00</td></tr>
<tr><td>05</td><td>Long cloth OT and Other purpose</td><td></td><td>5000 Meter</td><td></td><td></td><td>2,50,000.00</td></tr>
<tr><td>06</td><td>White long cloth</td><td></td><td>5000Meter</td><td></td><td></td><td>1,20,000.00</td></tr>
<tr><td>07</td><td>O.T Linen</td><td></td><td></td><td></td><td></td><td>8,00,000.00</td></tr>
<tr><td></td><td colspan="5">Total</td><td>42,73,055.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. 2018–19ನೇ ಸಾಲಿಗೆ ಅಗತ್ಯವಿರುವ ಲೆನಿನ್ ಸಾಮಗ್ರಿಗಳ ಪಟ್ಟಿಯ ಪೈಕಿ ಕ್ರಮ ಸಂಖ್ಯೆ:4ರ *Mosquito Nets ಪ್ರಮಾಣವನ್ನು ಆದಷ್ಟೂ ಕಡಿಮೆ ಮಾಡಿ ಟೆಂಡರ್ ಕರೆದು ಸದರಿ ವೆಚ್ಚವನ್ನು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.
</td></tr>
<tr><td>11</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 03 ಎಂ.ಆರ್.ಐ. ತಂತ್ರಜ್ಞರ ಹುದ್ದೆಯನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಳ್ಳುವ ಬಗ್ಗೆ.</td><td>ಭಾರತೀಯ ವೈದ್ಯಕೀಯ ಪರಿಷತ್ತಿನ ಪರಿವೀಕ್ಷಣೆಯಲ್ಲಿ MRI Scanning ಉಪಕರಣವನ್ನು ಸಂಸ್ಥೆಯಲ್ಲಿ ಅಳವಡಿಸದಿರುವುದರಿಂದ ಪದೇ ಪದೇ ಆಕ್ಷೇಪಣೆಗಳು ವ್ಯಕ್ತಪಡಿಸುತ್ತಿದ್ದ ಹಿನ್ನೆಲೆಯಲ್ಲಿ ಸರ್ಕಾರದ ಮಟ್ಟದಲ್ಲಿ ಎಮ್.ಆರ್.ಐ. ಸ್ಕ್ಯಾನಿಂಗ್ ಉಪಕರಣವನ್ನು ಖರೀದಿಸಲು ಇ–ಟೆಂಡರ್ ಪ್ರಕ್ರಿಯೆ ನಡೆಸಿದ್ದು ಅತಿ ಶೀಘ್ರದಲ್ಲೇ ಎಮ್.ಆರ್.ಐ. ಸ್ಕ್ಯಾನಿಂಗ್ ಉಪಕರಣವನ್ನು ಅಳವಡಿಸಲಾಗುತ್ತಿದೆ. ಸಂಸ್ಥೆಗೆ ಸರ್ಕಾರಿ ಆದೇಶ ಸಂಖ್ಯೆ:ಆಕುಕ 266 ಎಂಪಿಎಸ್ 2006, ದಿನಾಂಕ:12.09.2006 ರಲ್ಲಿ ಒಟ್ಟು 751 ಹುದ್ದೆಗಳು ಮಂಜೂರಾಗಿದ್ದು,ಎಮ್.ಆರ್.ಐ. ತಂತ್ರಜ್ಞರುಗಳ ಹುದ್ದೆಯು ಮಂಜೂರಾಗಿರುವುದಿಲ್ಲ. ಉಪಕರಣದ ನಿರ್ವಹಣೆಗೆ 03 ಎಮ್.ಆರ್.ಐ. ತಂತ್ರಜ್ಞರುಗಳ ಅವಶ್ಯಕತೆ ಇದ್ದು ಹೆಚ್ಚುವರಿಯಾಗಿ ಸರ್ಕಾರದಿಂದ 03 ಎಮ್.ಆರ್.ಐ. ತಂತ್ರಜ್ಞರುಗಳ ಹುದ್ದೆ ಸೃಜಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. ಸರ್ಕಾರದಿಂದ ಹುದ್ದೆಗಳು ಮಂಜೂರಾಗುವವರೆಗೂ ಸಾರ್ವಜನಿಕ ಹಿತದೃಷ್ಟಿಯಿಂದ ಪರ್ಯಾಯ ವ್ಯವಸ್ಥೆಯಾಗಿ ಕರ್ನಾಟಕ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ರೆಗ್ಯೂಲೇಟಿಂಗ್ ಅಥಾರಿಟಿ, ಬೆಂಗಳೂರು. ಇವರ ಮುಖಾಂತರ ಹೊರಗುತ್ತಿಗೆ ಆಧಾರದಲ್ಲಿ 03 ಎಮ್.ಆರ್.ಐ. ತಂತ್ರಜ್ಞರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವುದರ ಬಗ್ಗೆ ವಿಶೇಷ ಅಧಿಕಾರಿಗಳು, ಕರ್ನಾಟಕ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ರೆಗ್ಯೂಲೇಟಿಂಗ್ ಅಥಾರಿಟಿ, ಬೆಂಗಳೂರುರವರಿಗೆ ಪತ್ರ ಬರೆಯಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ವಿಷಯವನ್ನು ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಎಮ್.ಆರ್.ಐ. ತಂತ್ರಜ್ಞರುಗಳ ಹುದ್ದೆ ಸರ್ಕಾರದಿಂದ ಸಂಸ್ಥೆಗೆ ಮಂಜೂರಾಗದೇ ಇರುವುದರಿಂದ 03 ಎಮ್.ಆರ್.ಐ. ತಂತ್ರಜ್ಞರ ಹುದ್ದೆಗಳನ್ನು ಸೃಜಿಸಿಕೊಡುವಂತೆ ಕೋರಿ ಸರ್ಕಾರಕ್ಕೆ ಏಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸುವುದೆಂದು ತೀರ್ಮಾನಿಸಲಾಯಿತ. ಪ್ರಸ್ತುತ ಎಮ್.ಆರ್.ಐ. ಸ್ಕ್ಯಾನಿಂಗ್ ಯಂತ್ರವನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿರುವುದರಿಂದ ರೋಗಿಗಳ ಹಿತದೃಷ್ಟಿಯಿಂದ ಸದರಿ ವಿಭಾಗಕ್ಕೆ ಅವಶ್ಯಕವಿರುವ 3 ಎಮ್.ಆರ್.ಐ. ತಂತ್ರಜ್ಞರುಗಳನ್ನು ಕರ್ನಾಟಕ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ರೆಗ್ಯೂಲೇಟಿಂಗ್ ಅಥಾರಿಟಿ, ಬೆಂಗಳೂರು. ಇವರ ಮುಖಾಂತರ ನೇಮಿಸಿಕೊಳ್ಳುವ ಸದರಿ ಪ್ರಸ್ತಾವನೆಯನ್ನು ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಹೊರಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 12 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಜೀವರಸಾಯನಶಾಸ್ತ್ರ ಕೇಂದ್ರೀಯ ಪ್ರಯೋಗಾಲಯವನ್ನು 'Reagent Rental Basis``ನ ಟೆಂಡರ್ ಒಪ್ಪಂದದ ಮೂಲಕ ಅಭಿವೃದ್ಧಿಪಡಿಸುವ ಮತ್ತು ಉನ್ನತೀಕರಿಸುವ ಪ್ರಸ್ತಾವನೆ. | ಸಂಸ್ಥೆಯ ಜೀವರಸಾಯನ ಶಾಸ್ತ್ರ ಕೇಂದ್ರೀಯ ಪ್ರಯೋಗಾಲಯದಲ್ಲಿ ಹಾಲಿ ಇರುವ Auto Analyser ಉಪಕರಣದ ಮೂಲಕ ಸುಮಾರು 25 ಬಗೆಯ ರಕ್ತ ಪರೀಕ್ಷೆಗಳನ್ನು ಮಾತ್ರ ಮಾಡಲಾಗುತ್ತಿದ್ದು Intergrated Chemistry and immunoassay Analyser ಅವಶ್ಯಕತೆ ಯಂತ್ರವನ್ನು ಅಳವಡಿಸಿ ಕೊಂಡಲ್ಲಿ ಪರೀಕ್ಷೆಗಳ ಗುಣಮಟ್ಟ ಹೆಚ್ಚಿಸುವುದರೊಂದಿಗೆ ಸಾರ್ವಜನಿಕ ರೋಗಿಗಳಿಗೆ ಹಾರ್ಮೋನ್ ಪರೀಕ್ಷೆಗಳು, ಕ್ಯಾನ್ಸರ್ ಪತ್ತೆ ಪರೀಕ್ಷೆಗಳು, ಗ್ಲೈಕೋಸಿಲೇಟೆಡ್ Hb ಪರೀಕ್ಷೆಗಳು, ವಿಟಮಿನ್ ಪರೀಕ್ಷೆಗಳು, ರಕ್ತದಲ್ಲಿ ಔಷಧಿ ಮಟ್ಟವನ್ನು ಅಳೆಯುವ ಪರೀಕ್ಷೆಗಳು ಹಾಗೂ ಮತ್ತಿತರೆ ಇನ್ನು ಹೆಚ್ಚಿನ ಪ್ರಯೋಗಾಲಯ ಚಿಕಿತ್ಸಾ ಸೌಲಭ್ಯವನ್ನು ನೀಡಬಹುದಾಗಿರುತ್ತದೆ.<br>ಸದರಿ ಯಂತ್ರವು ಸಂಸ್ಥೆಯಲ್ಲಿ ಲಭ್ಯವಿಲ್ಲದೆ ಇರುವುದರಿಂದ ಇದಕ್ಕೆ ಪರ್ಯಾಯವಾಗಿ "Reagent Rental Basis``ನ ಮಾದರಿಯಲ್ಲಿ ಉತ್ತಮ ಗುಣಮಟ್ಟದ Reagentsಗಳನ್ನು ಪಡೆಯಲು ಕನಿಷ್ಠ 05 ವರ್ಷಗಳ ಅವಧಿಗೆ ಇ–ಟೆಂಡರ್ ಮಾಡಿದಲ್ಲಿ ಟೆಂಡರ್‌ದಾರರು Reagentsಗಳನ್ನು ಸರಬರಾಜು ಮಾಡಿ ಉಳಿದಂತೆ ಅನಲೈಸರ್, ಬ್ಯಾಕಪ್ ಉಪಕರಣಗಳನ್ನು ಸರಬರಾಜು ಮಾಡುವುದರೊಂದಿಗೆ ಉಪಕರಣದ ನಿರ್ವಹಣೆಯನ್ನು ಸಹ ಟೆಂಡರುದಾರರೇ ವಹಿಸಿಕೊಳ್ಳುತ್ತಾರೆ. ಇದರಿಂದಾಗಿ ಸಂಸ್ಥೆಗೆ ಯಾವುದೇ ರೀತಿಯ ಆರ್ಥಿಕ ಹೊರೆ ಉಂಟಾಗುವುದಿಲ್ಲ, ಈ ವ್ಯವಸ್ಥೆಯನ್ನು ಈಗಾಗಲೇ MMCRI, Mysore ಮತ್ತು MIMS, Mandya ಸಂಸ್ಥೆಗಳು ಅಳವಡಿಸಿಕೊಂಡಿರುವುದರಿಂದ ಬೋಧಕ ಆಸ್ಪತ್ರೆಯ ಜೀವರಸಾಯನಶಾಸ್ತ್ರ ಕೇಂದ್ರೀಯ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಪ್ರಯೋಗಾಲಯವನ್ನು "Reagent Rental Basis``ನ ಟೆಂಡರ್ ಒಪ್ಪಂದದ ಮೂಲಕ ಅಭಿವೃದ್ಧಿಪಡಿಸುವ ಮತ್ತು ಉನ್ನತೀಕರಿಸುವ ಪ್ರಸ್ತಾವನೆಗೆ ಇ-ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಏಕ ಕಡತದಲ್ಲಿ ಸಲ್ಲಿಸಿ ಅನುಮೋದನೆ ಪಡೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ "Reagent Rental Basis``ನ ಮಾದರಿಯಲ್ಲಿ ಉತ್ತಮ ಗುಣಮಟ್ಟದ Reagentsಗಳನ್ನು ಪಡೆಯಲು ಕನಿಷ್ಠ 05 ವರ್ಷಗಳ ಅವಧಿಗೆ ಇ-ಟೆಂಡರ್ ಮಾಡಲು ಸರ್ಕಾರದಿಂದ ಅನುಮೋದನೆ ದೊರೆತಿರುವುದರಿಂದ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಿ ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 13 | ಸಂಸ್ಥೆಯ ಶಸ್ತ್ರಚಿಕಿತ್ಸಾ ಕೊಠಡಿಮತ್ತು ಐ.ಸಿಯು. ವಿಭಾಗಗಳಲ್ಲಿರುವ ಹವಾನಿಯಂತ್ರಿತ (ಎ.ಸಿ) ಉಪಕರಣಗಳಿಗೆ ಎ.ಎಮ್.ಸಿ. ಮಾಡಿಸುವುದರ ಬಗ್ಗೆ. | ಸಂಸ್ಥೆಯ ಓ.ಟಿ. ಮತ್ತು ಐ.ಸಿ.ಯು ವಿಭಾಗಗಳಲ್ಲಿ ಒಟ್ಟು 38 Indoor units ಹಾಗೂ 8 Out door units ಎ.ಸಿ. ಯಂತ್ರಗಳನ್ನು ಹೊಸ ಆಸ್ಪತ್ರೆ ನಿರ್ಮಾಣದ ವೇಳೆಯಲ್ಲಿ ಅಳವಡಿಸಲಾಗಿದ್ದು ಈ ಹಿಂದೆ ಸದರಿ ಉಪಕರಣಗಳಿಗೆ ಎ.ಎಮ್.ಸಿ ಮಾಡಿಸಿರುವುದಿಲ್ಲ. ಸದರಿ ಉಪಕರಣಗಳು ಪದೇ ಪದೇ ರಿಪೇರಿಗೆ ಬರುತ್ತಿದ್ದು ರಿಪೇರಿ ವೆಚ್ಚ ಅಧಿಕವಾಗುವುದರೊಂದಿಗೆ ಉಪಕರಣದ ನಿರ್ವಹಣೆಯು ಸಹ ಕಷ್ಟಕರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪರ್ಯಾಯ ವ್ಯವಸ್ಥೆಯಾಗಿ ಓ.ಟಿ. ಮತ್ತು ಐ.ಸಿ.ಯು ವಿಭಾಗಗಳಲ್ಲಿರುವ ಎ.ಸಿ.ಗಳನ್ನು ಎ.ಎಮ್.ಸಿ. ಮಾಡಿದ್ದಲ್ಲಿ ರಿಪೇರಿ ವೆಚ್ಚ ಕಡಿಮೆಯಾಗುವುದರ ಜೊತೆಗೆ ನಿರ್ವಹಣೆಯು ಸಹ ಸುಲಭವಾಗುವುದರಿಂದ ಎ.ಸಿ. ಉಪಕರಣಗಳನ್ನು ಎ.ಎಮ್.ಸಿ. ನೀಡುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br><br>Sl.No. \| Particulars \| Qty in HP \| Number of Units \| Amount<br>1 \| ACs \| 78 \| 38 Indoor units 8 Out door units \| 2,41,800.00<br>Tax 18% \| 21,762.00<br>Total \| 2,85,324.00<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ಸಂಸ್ಥೆಯಲ್ಲಿರುವ ಎ.ಸಿ. ಉಪಕರಣಗಳನ್ನು ಎ.ಎಮ್.ಸಿ. ಮಾಡಿಸಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಿ ಮುಂದಿನ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ. ನಿಯಮನುಸಾರ ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 14 | ಸರ್ಕಾರವು ಎಂ.ಬಿ.ಬಿಎಸ್ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಿದ್ದು 2ನೇ ಕಂತಿನಲ್ಲಿ ಬಿಡುಗಡೆ ಮಾಡುವ ಅನುದಾನದಲ್ಲಿ ಅಗತ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. | ಸಂಸ್ಥೆಗೆ ಸರ್ಕಾರವು ಎಂ.ಬಿ.ಬಿಎಸ್. ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸಿದ್ದರಿಂದ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅಂದರೆ ಸಿವಿಲ್ ಕಾಮಗಾರಿಗಳಿಗೆ ರೂ.3735.00 ಲಕ್ಷ, ಸಿಬ್ಬಂದಿ ವೇತನಕ್ಕೆ ರೂ.1000.00 ಲಕ್ಷ ಹಾಗೂ ಉಪಕರಣ ಮತ್ತು ಪೀಠೋಪಕರಣಗಳ ಖರೀದಿಗೆ ರೂ.1422.00 ಲಕ್ಷ ಸೇರಿದಂತೆ ಒಟ್ಟು ರೂ.6157.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಸರ್ಕಾರದ ಆದೇಶ ಸಂಖ್ಯೆ: ಆಕುಕ 465 ಎಂಪಿಎಸ್ 2018, ಬೆಂಗಳೂರು ದಿನಾಂಕ: 14.03.2018ರ ಆದೇಶದಲ್ಲಿ ಸಿವಿಲ್ ಕಾಮಗಾರಿಗಳಿಗೆ ರೂ.1515.00 ಲಕ್ಷ, ಉಪಕರಣಗಳ ಖರೀದಿಗೆ ರೂ.500 ಲಕ್ಷಗಳು ಸೇರಿದಂತೆ ಒಟ್ಟು ರೂ.2015.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.<br>ಸರ್ಕಾರದಿಂದ ಉಪಕರಣಗಳ ಖರೀದಿಗಾಗಿ ಮೊದಲನೇ ಹಂತದಲ್ಲಿ ನಿಗದಿಯಾದ ರೂ.998.00 ಲಕ್ಷಗಳಲ್ಲಿ ರೂ.500.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಸದರಿ ಅನುದಾನದಲ್ಲಿಯೇ ಎಮ್.ಆರ್.ಐ. ಉಪಕರಣ ಖರೀದಿಗೆ ರೂ.370.00 ಲಕ್ಷ ಪಾವತಿ ಮಾಡಿದ್ದು ಬಾಕಿ ರೂ.130.00 ಲಕ್ಷಗಳು ಉಳಿದಿರುತ್ತದೆ. ಸರ್ಕಾರದಿಂದ ಮೊದಲನೇ ಹಂತದಲ್ಲಿನ ಬಿಡುಗಡೆಯಾಗಬೇಕಾಗಿರುವ ಬಾಕಿ ಅನುದಾನದ ಬಾಬ್ತು ರೂ.498.00 ಲಕ್ಷಗಳ ಅನುದಾನದಲ್ಲಿ ಉಪಕರಣ/ಪೀಠೋಪಕರಣಗಳನ್ನು ಖರೀದಿಸಲು ಈಗಾಗಲೇ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಗಳಲ್ಲಿ ಅನುಮೋದನೆ ಪಡೆದು ಇ–ಟೆಂಡರ್ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಾಗಿರುತ್ತದೆ.<br>ಮುಂದುವರೆದು ಉಪಕರಣಗಳ ಖರೀದಿಗೆ ಹೆಚ್ಚುವರಿ ಪ್ರಸ್ತಾವನೆ ಸಲ್ಲಿಸಬಹುದಾದ ಪ್ರಸ್ತಾವನೆಗೆ ಸರ್ಕಾರದಿಂದ ರೂ.502.00 ಲಕ್ಷಗಳು ನಿಗದಿಯಾಗಿದ್ದು ಸದರಿ ಅನುದಾನದಲ್ಲಿ ವಿಭಾಗದ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆ ಪಟ್ಟಿಗೆ ಅನುಸಾರವಾಗಿ ರೂ.490.00 ಲಕ್ಷಗಳ ವೆಚ್ಚದಲ್ಲಿ ಅಗತ್ಯವಿರುವ ಈ ಕೆಳಕಂಡ ಉಪಕರಣ/ಪೀಠೋಪಕರಣಗಳ ಸರಬರಾಜಿಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ವಿಷಯವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |

**EQUIPMENT DETAILS FOR 100 TO 150**

| Sl. No. | Name of the Equipments | Qty | Approximate cost per unit | Total Amount |
|---|---|---|---|---|
| | **Anatomy** | | | |
| 1 | Furnitures (Students chairs ,office tables& others) | | | 148500.00 |
| | **Physiology** | | | |
| 1 | Vitalograph (Simple Spirometer) | 15 | 9800.00 | 147000.00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ | | | | |
|---|---|---|---|---|---|---|
| | | 2 | Perimeter with charts (Listers) | 15 | 16000.00 | 240000.00 |
| | | 3 | Mosso's Ergography | 10 | 12000.00 | 120000.00 |
| | | 4 | Furnitures (Students chairs ,office tables& others) | | | 237000.00 |
| | | | **Biocehemistry** | | | |
| | | 1 | Furnitures (Students chairs ,office tables& others) | | | 191000.00 |
| | | | **Microbiology** | | | |
| | | 1 | Biosafety Cabinet Type-2A | 2 | 250000.00 | 500000.00 |
| | | 2 | Lab Refrigerator(Minimum 400 litres) | 4 | 50000.00 | 200000.00 |
| | | 3 | Furnitures (Students chairs ,office tables& others) | | | 498000.00 |
| | | | **Pathology** | | | |
| | | 1 | Gracing station | 1 | 2800000.00 | 2800000.00 |
| | | 2 | Cryostat | 1 | 2400000.00 | 2400000.00 |
| | | 3 | HBLC equipment Reagent Renatl basis | 1 | 1500000.00 | 1500000.00 |
| | | 4 | Furnitures (Students chairs ,office tables& others) | | | 473000.00 |
| | | | **Pharmacology** | | | |
| | | 1 | Furnitures (Students chairs ,office tables& others) | | | 232000.00 |
| | | | **Community Medicine** | | | |
| | | 1 | Furnitures (Students chairs ,office tables& others) | | | 406500.00 |
| | | | **Forensic Medicine** | | | |
| | | 1 | Furnitures (Students chairs ,office tables& others) | | | 90000.00 |
| | | | **General Medicine** | | | |
| | | 1 | Difibrillator Machine | 2 | 350000.00 | 700000.00 |
| | | 2 | Furnitures (Students chairs ,office tables& others) | | | 360000.00 |
| | | | **Pulmonary Medicine** | | | |
| | | 1 | Cardiac Monitor | 1 | 120000.00 | 120000.00 |
| | | 2 | Non Invasive Mechanical Ventolator | 2 | 120000.00 | 240000.00 |

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ | | | | |
|---|---|---|---|---|---|---|
| | | 3 | Furnitures (Students chairs, office tables & others) | | | 147000.00 |
| | | **Dermatology** | | | | |
| | | 1 | Furnitures (Students chairs ,office tables& others) | | | 201000.00 |
